ಕೊಡಗು ಜಿಲ್ಲೆಯಲ್ಲಿ ಸಣ್ಣ ನೀರಾವತಿ ಯೋಜನೆಗಳು

311(292) ಶ್ರೀ ಕೆ. ಎಸ್. ಮಾದಪ್ಪ(ಮಡಕೇರಿ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1997-98 ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಯಲ್ಲಿ ತೊಡಗಿಸಲಾಗಿರುವ ಹಣವೆಷ್ಟು?

ಆ) ಕೊಡಗಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಅಗತ್ಯವಾಗಿರುವ ಕಛೇರಿ ಮತ್ತು ವಾಹನ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) 39.84 ಲಕ್ಷ ರೂ.ಗಳು

ಆ) ಸಣ್ಣ ನೀರಾವರಿ ಉಪ ವಿಭಾಗ ಕಛೇರಿ ತೆರೆಯಲಾಗಿದೆ. ವಾಹನ ಸೌಲಭ್ಯ ಕಲ್ಪಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಚಿಕ್ಲಿ ಹೊಳೆ ಅಣೆಕಟ್ಟು ಕುರಿತು

312(291) ಶ್ರೀ ಡಿ. ಎಸ್. ಮಾದಪ್ಪ(ಮಡಕೇರಿ) : ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ಚಿಕ್ಲಿ ಹೊಳೆ ಅಣೆಕಟ್ಟಿನ ನಿರ್ಮಾಣಕ್ಕೆ ಸರ್ಕಾರ ಇಲ್ಲಿಯವರೆಗೆ ಖರ್ಚು ಮಾಡಿದ ಮೊತ್ತವೆಷ್ಟು

ಆ) ಚಿಕ್ಲಿ ಹೊಳೆ ಅಣೆಕಟ್ಟಿನ ನಿರ್ಮಾಣದಿಂದ ಎಷ್ಟು ಎಕರೆವಾರು ಪ್ರದೇಶಗಳು ನೀರಾವರಿಯ ಪ್ರಯೋಜನ ಪಡೆಯುತ್ತಿದೆ.

ಇ) ಅಣೆಕಟ್ಟಿನ ನಿರ್ಮಾಣದ ಒಟ್ಟು ಮೌಲ್ಯವೆಷ್ಟು.

ಈ) ಈ ಅಣೆಕಟ್ಟು ಎಷ್ಟು ವರ್ಷದ ಅವಧಿಯ ಯೋಜನೆ (ವಿವರ ನೀಡುವುದು)

ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :

ಅ) ಫೆಬ್ರವರಿ 1998ರ ಮಾಹೆಯ ಅಂತ್ಯದವರೆಗೆ ಈ ಯೋಜನೆಗಾಗಿ 327. 18 ಲಕ್ಷಗಳನ್ನು ವೆಚ್ಚ ಮಾಡಿರುತ್ತದೆ.

An amount of Rs. 327.18 lakh end of the Feb 98 has been include for the construction of C.R.P

ಆ) ಸದರಿ ಯೋಜನೆಯಡಿ ಉದ್ದೇಶಿಸಲಾದ 865 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ.

Contemplated Irrigation Post of 865 Ha. is created under the project.

ಇ) ಚಿಕ್ಲಿ ಹೊಳೆ ಜಲಾಶಯ ಯೋಜನೆಯ ಅಣೆಕಟ್ಟಿನ ಪುನರ್ ಪರಿಷ್ಕೃತ ಅಂದಾಜಿನ ಮೊತ್ತ ರೂ. 440 ಲಕ್ಷಗಳು

The cost of Anicut as per rev estimate of Chicklihole Reserve Project is Rs. 440 lakhs.

ಈ) ಚಿಕ್ಲಿ ಹೊಳೆ ಜಲಾಶಯ ಯೋಜನೆಯಡಿ ಅಣೆಕಟ್ಟು ಕೆಲಸವು 1981 ರಲ್ಲಿ ಪ್ರಾರಂಭವಾಗಿ 1985 ರಲ್ಲಿ ಮುಕ್ತಾಯಗೊಂಡಿರುತ್ತದೆ.

The dam and appurtenant works Chicklihole Anicut started and completed on 1985.

ಹೇಮಾವತಿ ನಾಲಾ ಕಾಮಗಾರಿ ಟೆಂಡರ್ ಕುರಿತು

314 (596) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಬೃಹತ್ ನೀರಾವರಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹೇಮಾವತಿ ನಾಲ ವಲಯದಲ್ಲಿ ಟೆಂಡರ್ ಕರೆಯದೆ ಕಾಮಗಾರಿಗಳ ಗುತ್ತಿಗೆಯನ್ನು ಕೊಡಲಾಗುತ್ತಿದೆಯೇ;

ಆ) ಕರ್ನಾಟಕ ನಿರ್ಮಾಣ ನಿಗಮಕ್ಕೆ ವಹಿಸಲಾದ ಕಾಮಗಾರಿಗಳು ಎಷ್ಟು; ಈ ನಿಗಮಕ್ಕೆ ನೀಡಲು ಕಾರಣವೇನು; ಸದರಿ ನಿಗಮದಲ್ಲಿ ಅವರೆ ಈ ಕಾಮಗಾರಿಗಳನ್ನು ಮಾಡಲು ಇರುವ ಅನಾನುಕೂಲವೇನು;

ಇ) ನಿಗಮದವರು ಗುತ್ತಿಗೆದಾರರಿಗೆ ಕೆಲಸ ವಹಿಸಿದ ಕಾಲದಲ್ಲಿ ಅನುಸರಿಸುತ್ತಿರುವ ನೀತಿಗಳೇನು;

ಈ) ಏಕ ಪಕ್ಷೀಯವಾಗಿ ಗುತ್ತಿಗೆ ಕೆಲಸ ನೀಡುವ ಪದ್ಧತಿಯನ್ನು ಅನುಸರಿಸಲಾಗುತ್ತಿದೆಯೇ;

ಉ) ಹಾಗಿದ್ದಲ್ಲಿ ಈ ರೀತಿ ಹಂಚಿಕೆಯನ್ನು ತಡೆಯಲಾಗುವುದೇ?

ಶ್ರೀ ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :

ಅ) ಹೇಮಾವತಿ ನಾಲಾ ವಲಯದಲ್ಲಿ ಕಾಮಗಾರಿಗಳನ್ನು ಟೆಂಡರ್ ಹಾಗೂ ಕೆ.ಎಸ್. ಸಿ. ಸಿ. ಮುಖಾಂತರ ಕೈಗೊಳ್ಳಲಾಗುತ್ತಿದೆ.

Works have been taken up through on tender and through K.S.C.C. in Hemavathy Canal Zone.

ಆ) 45 ಕಾಮಗಾರಿಗಳನ್ನು ಕೆ. ಎಸ್. ಸಿ. ಗೆ ವಹಿಸಲಾಗಿದೆ.